Breach of Tanks in Tumkur District

ಶ್ರೀ ಆರ್. ಚಿಕ್ಕಯ್ಯ (ಮಧುಗಿರಿ).—ತುಮಕೂರು ಜಿಲ್ಲೆಯಲ್ಲಿ ಮಧುಗಿರಿ ತಾಲ್ಲೂಕಿನಲ್ಲಿ ಮುಂಗಾರುಮಳೆಯಿಂದ ಕೆರೆಗಳು ಒಡೆದುಹೋಗಿ ಅನೇಕರು ಜಮೀನುಗಳನ್ನು ಮತ್ತು ಮನೆಗಳನ್ನೂ ಕಳೆದುಕೊಂಡಿದ್ದಾರೆ. ರೆವಿನ್ಯೂ ಮಿನಿಸ್ಟರ್ ನೋಡಿ ಅವರಿಗೆ ಮನೆಗಳನ್ನು ಕಟ್ಟಿಸಿ ಕೊಡುವುದಕ್ಕೆ ತಕ್ಕ ಪರಿಹಾರವನ್ನು ಕೊಡುತ್ತೇನೆಂದು ಹೇಳಿದರು. ಪ್ರಥಮತಃ ಅವರಿಗೆ ಸಾಲ ಏನು ಕೊಡುತ್ತೀರಾ ? ಅಲ್ಲಿರತಕ್ಕ ಬಿ. ಡಿ. ಓ. ಗಳು ಮತ್ತು ರೆವಿನ್ಯೂ ಇನ್‌ಸ್ಪೆಕ್ಟರುಗಳು ನಿಜವಾಗಿ ಆಫೆಕ್ಟೆಡ್ ಏರಿಯಗಳಲ್ಲಿರುವವರಿಗೆ ಏನೇನು ಪರಿಹಾರಗಳನ್ನು ಕೊಟ್ಟಿದ್ದಾರೆಂಬುದನ್ನು ತಿಳಿಸಬೇಕು.

ಅಧ್ಯಕ್ಷರು.—ತಾವು ಅದನ್ನು ನಿನ್ನೆ ಕೊಟ್ಟಿದ್ದು. ಕೇವಲ 24 ಗಂಟೆಯೊಳಗೆ ಪರಿಹಾರ ಆಗುತ್ತದೆಯೇ ? ತಾವು ಕಾಲ್ ಅಟೆನ್‌ಷನ್ ನೋಟೀಸನ್ನು ಅದರ ಬಗ್ಗೆ ಕಳುಹಿಸಿದ್ದೀರಿ. ಅದನ್ನು ನೋಡುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರಂ).—ಇಲ್ಲಿ ಏನು ಪ್ರೊಸೀಜರ್ ಇದೆಯೋ ಅದು ನನಗೆ ಅರ್ಥವಾಗಲಿಲ್ಲ. ಈಗ ಅಭಾವ ಪರಿಸ್ಥಿತಿ ಬಗ್ಗೆ ಕ್ಲಾರಿಫಿಕೇಷನ್ ಕೇಳಬೇಕಾಗಿದೆ. ನಾವು 4 ಜನ ಎಂ.ಎಲ್.ಎ.ಗಳು ಇದರ ಬಗ್ಗೆ ತಮಗೆ ಒಂದು ಅಪ್ಲಿಕೇಷನ್ ಕೊಟ್ಟಿದ್ದೆವು. ನಾವು ಹೇಳಿದ ವಿಷಯಗಳಿಗೆಲ್ಲ ಏನೇನು ಉತ್ತರ ಕೊಟ್ಟಿದ್ದೀರಿ ?

ಅಧ್ಯಕ್ಷರು.—ಅವರು ಉತ್ತರ ಹೇಳುವಾಗ ತಾವು ಇಲ್ಲಿಗೆ ಬಾರದಿದ್ದರೆ ಅವರು ಜವಾಬ್ದಾರರಲ್ಲ.

Sri H. S. SIDDAPPA.—Madam Speaker, I would like to draw the attention of the Government through your goodself that a lot of black money is being turned into white money through this lottery ticket. Yesterday an instance came to my notice.

MADAM SPEAKR.—The Hon. member has just now given it. And I will send it to the Government.

List of persons declared as political Sufferers in the State [contd]

ಶ್ರೀ ಎಸ್. ಮೈ. ಪಾಟೀಲ್ (ಸಿಂದಗಿ).—ಈಗ ರಾಷ್ಟ್ರಸೇವೆ ಮಾಡಿರುವ ಜನರಿಗೆ ಭತ್ಯ ಕೊಡುತ್ತಾರೆ. ನಾನು ಒಬ್ಬ ಜೈಲಿಗೆ ಹೋದಂಥ, ವ್ಯಕ್ತಿ. ಸರ್ಕಾರದವರು ಲಸ್ಟ್ ಮಾಡುತ್ತಿದ್ದಾರೆ. ನಾನು ಎಷ್ಟೊಸಾರಿ ಜೈಲಿಗೆ ಹೋಗಿದ್ದೇನೆ. ಅಂದಮೇಲೆ ನಮ್ಮ ಕಡೆ ಎಂ.ಎಲ್.ಎ. ಯಾರಿದ್ದಾರೆಂಬುದನ್ನು ಸರ್ಕಾರ ನೋಡಬೇಕು. ಅದರಲ್ಲಿ ಯಾರನ್ನೂ ಕಮಿಟ್ ಮಾಡುವುದು ಬೇಕಿಲ್ಲ. ಅವರು ನಮ್ಮನ್ನು ಈ ವಿಚಾರದಲ್ಲಿ ಕನ್‌ಸರ್ಟ್ ಮಾಡಬೇಕು. ನಮ್ಮಲ್ಲಿಯೂ ಬಹಳ ಜನ ಪೊಲಿಟಿಕಲ್ ಸಫರರ್ಸ್ ಇದ್ದಾರೆ. ನಾಲ್ಕುವರ್ಷ ಜೈಲಿಗೆ ಹೋಗಿ ನತ್ತ ನಂತರ ಅವರಿಗೆ ಭತ್ಯ ಮಂಜೂರಾಯಿತು. ಈ ಒಂದು ಸನ್ನಿವೇಶದಲ್ಲಿ ನನ್ನ ಸಲಹೆಯನ್ನು ತೆಗೆದುಕೊಳ್ಳಬೇಕು. ನಾನೇನೂ ಭತ್ಯ ತೆಗೆದುಕೊಳ್ಳುವುದಿಲ್ಲ. ಅಸೆಂಬ್ಲಿ ಮೆಂಬರ್ಸ್ ಯಾರು ಹಿಂದೆ ಜೈಲಿಗೆ ಹೋಗಿದ್ದಾರೆ, ಅವರ ಜೊತೆಯಲ್ಲಿ ಮಾನ್ಯ ಮಂತ್ರಿಗಳು ಸಮಾಲೋಚನೆ ಮಾಡಬೇಕು.

ಅಧ್ಯಕ್ಷರು.—ತಾವು ಸಲಹೆ ಕಳುಹಿಸಿದರೆ ಅದನ್ನು ಸರ್ಕಾರದವರು ನೋಡುತ್ತಾರೆ. ಅವರು 30 ಜನರನ್ನು ಆರಿಸಿಲಾಗಿದೆಯೆಂದು ಹೇಳಿದರು. ತಮ್ಮ ಸಲಹೆ ಏನು ಹೇಳುತ್ತಿದ್ದಿರೋ ಅದನ್ನು ನನಗೆ ಬರೆದು ಕಳುಹಿಸಿ. ಅವರಿಗೆ ಅದನ್ನು ಕಳುಹಿಸಿಕೊಡುತ್ತೇನೆ. ಆದರೆ ಸರ್ಕಾರ ಮಾಡುವುದನ್ನೆಲ್ಲಾ ತಮಗೆ ಬರೆದು ಕಳುಹಿಸಿ ಎಂದರೆ ಹೇಗೆ ? ಅವನ್ನು ಪಟ್ಟಿಮಾಡಿ ಬರೆದು ಕೊಟ್ಟು ಇದನ್ನು ಹೀಗೆಯೇ ಮಾಡುತ್ತೇವೆಂದು ಅವರು ತಮಗೆ ಹೇಳುವುದಕ್ಕಾಗುತ್ತದೆಯೇ ? ಎಲ್ಲವನ್ನೂ ಹೀಗೆಯೇ ಕೇಳುತ್ತಾ ಹೋದರೆ ಅವರ ಒಂದು ಮಹತ್ವವೇ ಹೋಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ ನಾನು ತಮ್ಮಲ್ಲಿ ಒಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಈ ವಿಚಾರದಲ್ಲಿ ತಾವು ನಮಗೆ ರಕ್ಷಣೆ ಕೊಡಬೇಕು.....